# ಸಂಸ್ಕೃತಿ ಪರಿಚಯ –೨

ಇಂಗ್ಲಿಷ್ ಮೂಲ : **ಸೀತಾ ಲಖಾನಿ** ; ಕನ್ನಡ ರೂಪಾಂತರ : **ಡಾ. ಕೆ.ಎಲ್ ಪ್ರಸನ್ನಾಕ್ಷಿ**


## ಧಾರ್ಮಿಕ ಚಿಹ್ನೆಗಳು ಮತ್ತು ಅವುಗಳ ಮಹತ್ವ

ಕೆಲವು ಮುಖ್ಯವಾದ ವಿಷಯಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಲು ನಾವು ಸಂಕೇತಗಳನ್ನು ಬಳಸಿಕೊಳ್ಳುತ್ತೇವೆ. ಒಂದು ಶಾಲೆಯ ಧ್ಯೇಯವನ್ನು ಸೂಚಿಸುವ 'ಘೋಷಣೆ', ಒಂದು ದೇಶದ ಜನರ ಚಿಂತನೆ ವಿಚಾರಗಳನ್ನು ತಿಳಿಸಿಕೊಡುವ 'ಧ್ವಜ' ಮೊದಲಾದವು ಅಂತಹ ಸಂಕೇತಗಳಿಗೆ ಉದಾಹರಣೆಗಳು. ಇದರಂತೆಯೇ ದೇವರನ್ನು ನೆನಪಿಸಿಕೊಡುವ ಗುರುತುಗಳು ಅಥವಾ ಸಂಕೇತಗಳು ಕೂಡ ಬಹಳ ಹಿಂದಿನ ಕಾಲದಿಂದಲೂ ಪ್ರಚಾರದಲ್ಲಿವೆ. ಅವುಗಳನ್ನು ಕೇಳಿದೊಡನೆ ಅಥವಾ ನೋಡಿದೊಡನೆಯೇ ನಮಗೆ ದೇವರು ನೆನಪಾಗುತ್ತಾನೆ. 'ಓಂ' ಮತ್ತು 'ಸ್ವಸ್ತಿಕ' ಅಂತಹ ಎರಡು ಗುರುತು ಅಥವಾ ಚಿಹ್ನೆಗಳು. ಅವುಗಳನ್ನು ಹಿಂದೂಗಳು ವಿಶೇಷವಾಗಿ ಬಳಸುತ್ತಾರೆ.

**ಓಂಕಾರ :** ಬೇರೆ ಎಲ್ಲ ಶಬ್ದಗಳಿಗಿಂತಲೂ ಓಂಕಾರವು ದೇವರನ್ನು ಹೆಚ್ಚು ವ್ಯಾಪಕವಾಗಿ, ಸಂಪೂರ್ಣವಾಗಿ ಸೂಚಿಸುವ ಶಬ್ದ ಎಂದು ಹಿಂದೂಗಳು ನಂಬುತ್ತಾರೆ. ಅದಕ್ಕೆಂದೇ ಹಿಂದಿನ ಕಾಲದ ಋಷಿಗಳು ಮುಖ್ಯವಾಗಿ ಓಂಕಾರವನ್ನೇ ಆಧಾರವನ್ನಾಗಿ ಮಾಡಿಕೊಂಡು, ಧ್ಯಾನವನ್ನು ಮಾಡುತ್ತಿದ್ದರು. ಧ್ಯಾನದಲ್ಲಿ ಅವರು ಭಗವಂತನ ಸಾನ್ನಿಧ್ಯವನ್ನು ಅನುಭವಿಸುತ್ತಿದ್ದರು. ಕೆಲವೊಮ್ಮೆ ತಮ್ಮ ಅಂತರಂಗದಲ್ಲಿ ಅವರು ಓಂಕಾರದ ನಾದತರಂಗಗಳು ಏಳುವುದನ್ನು ಅನುಭವಿಸುತ್ತಿದ್ದರು. ಈ ಕಾರಣಕ್ಕಾಗಿಯೇ ಓಂಕಾರವು ಹಿಂದೂಗಳಿಗೆ ಅತ್ಯಂತ ಪವಿತ್ರವಾದುದು. ಅವರು ಇದನ್ನು ದೇವರ ಇನ್ನೊಂದು ರೂಪವೆಂದೇ ಭಾವಿಸುತ್ತಾರೆ; 'ಓಂ' ಎಂದು ಹೇಳಿಯೇ ಎಲ್ಲ ಪ್ರಾರ್ಥನೆಗಳನ್ನೂ ಪ್ರಾರಂಭ ಮಾಡುತ್ತಾರೆ. ಧ್ಯಾನಕ್ಕೆ ಕುಳಿತುಕೊಳ್ಳುವ ಮೊದಲು ಕೂಡ ಕೆಲವು ಸಲ ಓಂಕಾರವನ್ನು ಉಚ್ಚಾರ ಮಾಡುತ್ತಾರೆ.



**ಸ್ವಸ್ತಿಕ :** ಸ್ವಸ್ತಿಕವು ಶುಭವನ್ನು, ಒಳ್ಳೆಯದನ್ನು, ಅದೃಷ್ಟವನ್ನು ಸೂಚಿಸುತ್ತದೆ. ಅದರ ಗೆರೆಗಳು ನಾಲ್ಕೂ ದಿಕ್ಕುಗಳಿಗೆ ತಿರುಗಿರುತ್ತವೆ. ಹೀಗಾಗಿ 'ಪ್ರಪಂಚದ ಎಲ್ಲಾ ಕಡೆಗಳಿಂದಲೂ, ಯಾವ ಭೇದಭಾವವೂ ಇಲ್ಲದೆ ಒಳ್ಳೆಯದು ನಮ್ಮ ಕಡೆಗೆ ಬರಲಿ' ಎಂಬ ಆದರ್ಶವನ್ನು ಸ್ವಸ್ತಿಕವು ಸೂಚಿಸುತ್ತದೆ. ಹಾಗೆಯೇ ಸ್ವಸ್ತಿಕವು ಹೃದಯವೈಶಾಲ್ಯದ ಸಂಕೇತವಾಗಿದೆ.



**ಕಮಲ:** ಕಮಲವು ಪರಿಶುದ್ಧತೆಯ ಸಂಕೇತ. ಅದು ಹುಟ್ಟುವುದು ಕೆಸರಿನಲ್ಲಿ. ಆದರೆ ಕಮಲಕ್ಕೆ ಕೆಸರು ಸ್ವಲ್ಪವೂ ಹತ್ತಿಕೊಳ್ಳುವುದಿಲ್ಲ. ಕಮಲವು ತುಂಬಾ ಸುಂದರವಾದ ಹೂವು. ಅದು ಪರಿಶುದ್ಧತೆಯ ಸಂಕೇತ. ನೀರಾಗಲಿ, ಕೊಳೆಯಾಗಲಿ ಅದಕ್ಕೆ ಅಂಟಿಕೊಳ್ಳುವುದೇ ಇಲ್ಲ. ಪ್ರಪಂಚದಲ್ಲಿ ಎಷ್ಟೋ ಕೆಡುಕು, ಕೊಳಕುಗಳಿವೆ. ಅದನ್ನು ಹತ್ತಿಸಿಕೊಳ್ಳದೆ ಪರಿಶುದ್ಧರಾಗಿ ಬದುಕಲು ಪ್ರಯತ್ನಿಸಬೇಕು. ಅದಕ್ಕೆ ದೇವರ ಹೆಸರನ್ನು ಜಪಿಸಬೇಕು, ದೇವರ ರೂಪದ ಧ್ಯಾನ ಮಾಡಬೇಕು, ದೇವರ ಪ್ರಾರ್ಥನೆ, ಸಂಕೀರ್ತನೆ ಮಾಡಬೇಕು. ಆಗ ನಮ್ಮ ಮನಸ್ಸು ಶುದ್ಧವಾಗುತ್ತದೆ. ನಮ್ಮ ನಡವಳಿಕೆಗಳು ಇತರರಿಗೆ ಸಂತೋಷವನ್ನು ಉಂಟುಮಾಡುತ್ತವೆ. ಕಮಲವು ನಮಗೆ ತೋರಿಸಿಕೊಡುವುದು ಇದನ್ನೇ.




**ಹಣೆಯಲ್ಲಿ ಧರಿಸುವ ಚಿಹ್ನೆಗಳು:** ಹಿಂದೂಗಳು ತಮ್ಮ ಹಣೆಯಲ್ಲಿ ಬೇರೆ ಬೇರೆ ರೀತಿಯ ಚಿಹ್ನೆಗಳನ್ನು ಧರಿಸಿಕೊಳ್ಳುತ್ತಾರೆ. ಕೆಲವರು 'ತಿಲಕ'ವನ್ನು ಇಟ್ಟುಕೊಳ್ಳುತ್ತಾರೆ. ಮತ್ತೆ ಕೆಲವರು ವಿಭೂತಿಯನ್ನು ಅಡ್ಡಪಟ್ಟೆಯಾಗಿ ಹಾಕಿಕೊಳ್ಳುತ್ತಾರೆ. ಇನ್ನೂ ಕೆಲವರು ಉದ್ದವಾದ ನಾಮಗಳನ್ನು ಹಣೆಯಲ್ಲಿ ಇಟ್ಟುಕೊಳ್ಳುತ್ತಾರೆ. ಅದಲ್ಲದೆ ಹಲವರು ಗೋಪೀಚಂದನವನ್ನು ಹಣೆಯಲ್ಲಿ ಇಟ್ಟುಕೊಳ್ಳುತ್ತಾರೆ. ಈ ಸಂಕೇತಗಳು ದೇವರ ನೆನಪನ್ನು ಉಂಟುಮಾಡುತ್ತವೆ. ಆ ಮೂಲಕ ಯಾವಾಗಲೂ ದೇವರನ್ನು ಸ್ಮರಿಸುವುದಕ್ಕೆ ಸಹಾಯಮಾಡುತ್ತವೆ.

**ಗುರುಗಳು:** ಹಿಂದೂಧರ್ಮದ ಬಗ್ಗೆ ಉಪದೇಶ ಮಾಡುವವರನ್ನು ಗುರುಗಳು ಎಂದು ಕರೆಯುತ್ತಾರೆ. ಕೆಲವು ಗುರುಗಳು ಶಿಷ್ಯರಿಗೆ ಮಂತ್ರಗಳನ್ನು ಬೋಧಿಸುತ್ತಾರೆ. ಮಂತ್ರಗಳೆಂದರೆ ದೇವರ ಹೆಸರನ್ನು ಒಳಗೊಂಡ ಶಕ್ತಿಯುತ ಸೂತ್ರಗಳು. ಅವುಗಳನ್ನು ಬಹಳ ಕಾಲ, ಶ್ರದ್ಧೆಯಿಂದ ಜಪಿಸುವುದರಿಂದ ದೇವರಲ್ಲಿ ಭಕ್ತಿ ಬೆಳೆಯುತ್ತದೆ, ಏಕಾಗ್ರತೆ

ಸಿದ್ಧಿಸುತ್ತದೆ, ದೇವರ ಬಗೆಗಿನ ಜ್ಞಾನ ಉಂಟಾಗುತ್ತದೆ. ಧರ್ಮದ ಬಗ್ಗೆ, ದೇವರ ಬಗ್ಗೆ ಉಪದೇಶ ಮಾಡುವವರನ್ನೂ ಗುರುಗಳು ಎಂದು ಕರೆಯಬಹುದು.

**ಸ್ವಾಮಿಗಳು:** ತಮ್ಮ ಮನೆ, ಬಂಧುಗಳು ಎಲ್ಲರನ್ನೂ ತ್ಯಾಗಮಾಡಿ, ದೇವರಿಗೆ ಮುಡುಪಾದ ಜೀವನ ಮಾಡುವವರನ್ನು ಸ್ವಾಮಿಗಳು ಎಂದು ಕರೆಯುತ್ತಾರೆ. ಇಂಥವರು ಕಾವಿ ಬಟ್ಟೆ ಧರಿಸುತ್ತಾರೆ. ಕಾವಿ ಬಣ್ಣ ತ್ಯಾಗದ ಸಂಕೇತ. ಇವರು ಆಶ್ರಮಗಳಲ್ಲಿ, ಮಠಗಳಲ್ಲಿ ವಾಸಮಾಡುತ್ತಾರೆ. ಅಲ್ಲಿ ದೇವರ ಚಿಂತನೆ, ದೇವರ ಪೂಜೆ ಮಾಡುತ್ತಾರೆ. ದೇವರ ಬಗ್ಗೆ, ಧರ್ಮದ ಬಗ್ಗೆ ಜನಕ್ಕೆ ಉಪದೇಶ ಮಾಡುತ್ತಾರೆ. ಅದಲ್ಲದೆ, ಜನಗಳ ಸೇವೆಯನ್ನೂ ಮಾಡುತ್ತಾರೆ. ಊಟ ಹಾಕುವುದು, ರೋಗಿಗಳಿಗೆ ಔಷಧಿ ಕೊಡುವುದು, ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವುದು ಅಥವಾ ಅವರು ಇರುವುದಕ್ಕೆ ವಸತಿಗೃಹಗಳನ್ನು ಏರ್ಪಾಡುಮಾಡುವುದು – ಮುಂತಾದ ಅನೇಕ ಸೇವಾಕಾರ್ಯಗಳನ್ನು ಮಠ, ಆಶ್ರಮಗಳಲ್ಲಿ ಮಾಡುತ್ತಾರೆ. ಹೀಗೆ ಜನರಲ್ಲೇ ದೇವರನ್ನು ಕಂಡು ಸೇವೆ ಮಾಡುತ್ತಾರೆ. ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರು 'ಜನರ ಸೇವೆಯೇ ದೇವರ ಪೂಜೆ' ಎಂದು ಹೇಳುತ್ತಿದ್ದರು.



### ಉಪದೇಶವನ್ನು ಆಚರಣೆಯಲ್ಲಿ ತೋರಿಸಬೇಕು

ಒಂದು ಮಠವಿತ್ತು. ಅದರಲ್ಲಿ ಕೆಲವು ಸ್ವಾಮಿಗಳು ಇದ್ದರು. ಅವರು ಯಾವಾಗಲೂ ದೇವರ ಧ್ಯಾನ ಮಾಡುತ್ತಿದ್ದರು; ದೇವರ ಬಗ್ಗೆಯೇ ಚಿಂತಿಸುತ್ತಿದ್ದರು. ಅಲ್ಲಿಗೆ ನೀಲಕಂಠ ಎಂಬ ಬಾಲಕ ಬಂದ. ಅವನು ಮಠದಲ್ಲಿದ್ದ ಎಲ್ಲಾ ಸ್ವಾಮಿಗಳ ಸೇವೆ ಮಾಡುತ್ತಿದ್ದ. ಅವನು ಹಲವಾರು ಕೆಲಸಗಳನ್ನು ಮಾಡುತ್ತಿದ್ದ; ಅಡುಗೆಗೆ ಸಹಾಯ ಮಾಡುತ್ತಿದ್ದ. ಸ್ವಾಮಿಗಳಿಗೆ ಅಡುಗೆ ಮಾಡಿ ಊಟ ಬಡಿಸುತ್ತಿದ್ದ. ಹೀಗೆ ಸದಾ ಕೆಲಸ ಮಾಡುತ್ತಿದ್ದ. ಕಷ್ಟಪಟ್ಟು ದುಡಿಯುತ್ತಿದ್ದ ಅವನನ್ನು ಕಂಡು ಮಠದಲ್ಲಿ ಇದ್ದ ಎಲ್ಲರೂ ಇಷ್ಟಪಡುತ್ತಿದ್ದರು. ಸೇವೆಯನ್ನು ಹೇಗೆ ಮಾಡಬೇಕು ಎಂಬುದಕ್ಕೆ ಅವನು ಮಾದರಿಯಾಗಿದ್ದನು.

ನೀಲಕಂಠ ಸೇವೆಯ ಬಗ್ಗೆ ಬೇರೆಯವರಿಗೆ ಉಪದೇಶವನ್ನೇನೂ ಮಾಡುತ್ತಿರಲಿಲ್ಲ. ಅವನ ನಡತೆಯೇ ಬೇರೆಯವರಿಗೆ ಒಂದು ಪಾಠವಾಗಿತ್ತು. ನಾವು ಯಾವ ವಿಚಾರವನ್ನಾಗಲಿ, ಸುಮ್ಮನೆ ಹೇಳುತ್ತಿದ್ದರೆ ಅದು ಬೇರೆಯವರ ಮೇಲೆ ಪ್ರಭಾವ ಬೀರುವುದಿಲ್ಲ. ಅದನ್ನು ನಡೆದು ತೋರಿಸಬೇಕು. ಆಗ ಮಾತ್ರ ಅದು ಎಲ್ಲರ ಮೇಲೆ ಪ್ರಭಾವ ಬೀರುತ್ತದೆ; ಉತ್ತಮ ಪಾಠವಾಗುತ್ತದೆ; ಬಹುಕಾಲ ನೆನಪಿನಲ್ಲಿ ಉಳಿಯುತ್ತದೆ. ಈ ನೀಲಕಂಠನೇ ಮುಂದೆ ಸ್ವಾಮಿಗಳಾದರು. 'ಸ್ವಾಮಿ ನಾರಾಯಣ' ಎಂಬ ಮಹಾತ್ಮರಾಗಿ ಪ್ರಸಿದ್ಧಿ ಪಡೆದರು. •

## ಹಳ್ಳಿಗಾಡು ಮಹಿಳೆಯರ ಚಿಪ್ಕೊ ಆಂದೋಲನ

ಕಾಡುಗಳ ಸಂರಕ್ಷಣೆ ವಿಷಯದಲ್ಲಿ ಹಳ್ಳಿಯ ಜನ, ಅನಕ್ಷರಸ್ಥರು ಮತ್ತು ಮಹಿಳೆಯರು ಹೋರಾಟ ಮಾಡಿ ನಮಗೆ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ. ಅಂಥ ಹೋರಾಟಗಳಲ್ಲಿ ೧೯೭೦ರ ದಶಕದಲ್ಲಿ ಆರಂಭವಾದ ಚಿಪ್ಕೊ ಚಳವಳಿ ಪ್ರಮುಖವಾದುದು. ಲಾಭಕೋರ ಕಂಟ್ರಾಕ್ಟರುಗಳು ಕಾಡು ಕಡಿಯುವುದನ್ನು ತಪ್ಪಿಸಲು ಉತ್ತರಪ್ರದೇಶದ ಚಮೋಲಿ ಜಿಲ್ಲೆಯ ಮಹಿಳೆಯರು ಸ್ವಯಂಸ್ಫೂರ್ತಿಯಿಂದ ಮರಗಳನ್ನು ಅಪ್ಪಿಕೊಂಡು ನಿಂತುಬಿಟ್ಟರು. ಮಹಿಳೆಯರ ಛಲದ ಮುಂದೆ ಲಾಭಕೋರರ ಕೊಡಲಿ ಆಟ ನಡೆಯಲಿಲ್ಲ. ಈ ಹೋರಾಟಕ್ಕೆ ಸ್ಪಂದಿಸಿದ ಭಾರತ ಸರ್ಕಾರ ಹಿಮಾಲಯದ ಕಾಡುಗಳಲ್ಲಿ ಮರ ಕಡಿಯುವುದರ ಮೇಲೆ ೧೫ ವರ್ಷಗಳ ನಿಷೇಧ ಹೇರಿತು. ಈ ಹಳ್ಳಿಗರ ಹೋರಾಟ ದೇಶದ ಇತರ ಕಡೆಗಳಲ್ಲಿ ಇಂತಹುದೇ ಹೋರಾಟಕ್ಕೆ ಸ್ಫೂರ್ತಿ ನೀಡಿತು. ಕರ್ನಾಟಕದಲ್ಲಿ ೧೯೮೩ ರಲ್ಲಿ ಆರಂಭಗೊಂಡ ಅಪ್ಪಿಕೊ ಚಳವಳಿಗೆ ಪ್ರೇರಣೆ ನೀಡಿದ್ದು ಚಿಪ್ಕೊ ಆಂದೋಲನವೇ.